**ಓಎಸ್ ನಂಃ 379/2021 ಡಿ.ಡಬ್ಲ್ಯೂ- 1**

**ದಿನಾಂಕಃ 30.07.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

<u>ಪಾಟೀಸವಾಲುಃ ವಾದಿಯ ಪರ ಶ್ರೀ ಎಸ್.ಬಿ.ಆರ್. ವಕೀಲರಿಂದಃ</u>

ವಾದಿಗಳು ನಿಮ್ಮ ವಿರುದ್ಧ ಯಾವ ವಿಚಾರವಾಗಿ ದಾವೆಯನ್ನು ಹಾಕಿರುತ್ತಾರೆ ಎಂದು ತಿಳಿದು ಕೊಂಡಿರುತ್ತೀರಾ ಎಂದರೆ ತಿಳಿದುಕೊಂಡಿರುತ್ತೇನೆ. ನಿಮ್ಮ ಊರಿನ ಪಕ್ಕದ ತೊಟದಲ್ಲಿ ಇರುವ ಡಾ. ವೇಮಣ್ಣ ಎಂಬುವವರ ಪರಿಚಯ ಇರುತ್ತದೆಯಾ ಎಂದರೆ ಅವರು ಊರಿನಲ್ಲಿ ಇಲ್ಲ ತೋಟದಲ್ಲಿ ಇದ್ದರು ಈಗ ತೀರಿಕೊಂಡಿರುತ್ತಾರೆ. ಸದರಿ ವೇಮಣ್ಣರವರಿಗೆ ಸುಮಾರು 70 ಎಕರೆವರಗೂ ಜಮೀನು ಇತ್ತು ಎಂದರೆ ನನಗೆ ಗೊತ್ತಿಲ್ಲ. ಐಮರೆಡ್ಡಿ ಗ್ರಾಮದಲ್ಲಿ ನಿಮ್ಮದು ಜಮೀನು ಇದೆಯಾ ಎಂದರೆ ಇದೆ. ಅದರ ಸ.ನಂ. ಎಷ್ಟು ಎಂದರೆ ಸ.ನಂ. 43 ಮತ್ತು 44 ಎನ್ನುತ್ತಾರೆ. ಸ.ನಂ. 43 ರಲ್ಲಿ ನಿಮ್ಮದು ಎಷ್ಟು ಎಕರೆ ಆಸ್ತಿ ಇರುತ್ತದೆ ಎಂದರೆ 3 ಎಕರೆ 14 ಗುಂಟೆ ಇದ್ದು 1 ಗುಂಟೆ ಕರಾಬು ಇರುತ್ತದೆ. ಸ.ನಂ. 44 ರಲ್ಲಿ ನಿಮ್ಮದು ಎಷ್ಟು ಎಕರೆ ಆಸ್ತಿ ಇರುತ್ತದೆ ಎಂದರೆ 1 ಎಕರೆ 1 ಎಕರೆ 24 ಗುಂಟೆ ಇರುತ್ತದೆ. ಸ.ನಂ. 43 ರ ಆಸ್ತಿ ನಿಮಗೆ ಹೇಗೆ ಬಂದಿರುತ್ತದೆ ಎಂದರೆ ದರ್ಕಾಸ್ತು ಮಂಜೂರು ಆಗಿರುತ್ತದೆ. ಯಾವ ಇಸವಿಯಲ್ಲಿ ಬಂದಿರುತ್ತದೆ 1998 ರಲ್ಲಿ ಬಂದಿರುತ್ತದೆ. ಯಾರ ಹೆಸರಿಗೆ ಇರುತ್ತದೆ ಎಂದರೆ ನನ್ನ ತಂದೆ ಹೆಸರಿಗೆ ಬಂದಿರುತ್ತದೆ. ಸದರಿ ದರ್ಕಾಸ್ತು ಮಂಜುರಾದ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದರೆ ಪಹಣಿ ಕೊಟ್ಟಿರುತ್ತೇನೆ. ಸದರಿ ದರ್ಕಾಸ್ತು ಮಂಜೂರು ದಾಖಲೆ ಕೊಡಲು ತೊಂದರೆ ಇರುತ್ತದೆಯಾ ಎಂದರೆ ಇಲ್ಲ. ದರ್ಕಾಸ್ತು ಮಂಜೂರಾದ ದಾಖಲೆ ಪ್ರಕಾರಣ ನಿಮ್ಮ ಜಮೀನಿನ ಅಂದರೆ ಸ.ನಂ. 43 ರ

ಚಕ್ಕುಬಂದಿ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ವೆಂಕಟೇಶಪ್ಪ, ಉತ್ತರಕ್ಕೆ ಮುನಿಶಾಮಪ್ಪ, ದಕ್ಷಿಣಕ್ಕೆ ರಸ್ತೆ ಇರುತ್ತದೆ ಎನ್ನುತ್ತಾರೆ. ದಕ್ಷಿಣಕ್ಕೆ ಇರುವ ರಸ್ತೆ ಕಡಪ ಬೆಂಗಳೂರು ಸ್ಟೇಟ್ ಹೈವೆ ಎಂದರೆ ಹೌದು. ಪೂರ್ವ ದಿಕ್ಕಿಗೆ ರಸ್ತೆ ಆದ ನಂತರ ಸ.ನಂ. **43** ರ ಉಳಿಕೆ ಜಮೀನು ಇರುತ್ತದೆ ಎಂದರೆ ಸಾಕ್ಷಿ ಇದೆ ಅದು ನಮ್ಮದೇ ಎನ್ನುತ್ತಾರೆ. ರಸ್ತೆ ಆದ ನಂತರ ಬರುವ ಸ.ನಂ. **43** ಜಮೀನು ನಿಮ್ಮದೇ ಎಂದು ಹೇಳುವುದಕ್ಕೆ ದಾಖಲೆ ಇರುತ್ತದೆಯಾ ಎಂದರೆ **40** ವರ್ಷಗಳಿಂದ ಉಳುಮೆ ಮಾಡುತ್ತಿದ್ದೆವೆ ಎನ್ನುತ್ತಾರೆ. ಸ.ನಂ. **43** ರಲ್ಲಿ ಮಂಜೂರಾಗುವ ಮುಂಚೆ ನೀವು ಸ್ವಾಧಿನದಲ್ಲಿ ಇರುತ್ತೀರಾ ಎಂದರೆ ಇರುತ್ತೇನೆ. ಆ ರೀತಿ ಇದ್ದರೆ ರಸ್ತೆ ಆದ ನಂತರ ಇರುವ ಜಮೀನನ್ನು ಮಂಜೂರು ಮಡುವುದಕ್ಕೆ ಅರ್ಜಿ ಸಲ್ಲಿಸಬಹುದಿತ್ತು ಎಂದರೆ ಸಲ್ಲಿಸಿರುತ್ತೇವೆ ಎನ್ನುತ್ತಾರೆ. ಯಾವ ವರ್ಷ ನೀವು ಅರ್ಜಿ ಕೊಟ್ಟಿರುತ್ತೀರಾ ಎಂರೆ **2019-20** ರಲ್ಲಿ ಹಾಕಿರುತ್ತೇವೆ. ಸಾಕ್ಷಿಗೆ ಒಂದು ಸ್ಕೆಚ್ ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ **10** ಎಂದು ಗುರುತಿಸಲಾಯಿತು. ಸದರಿ ನಕ್ಷೆಯಲ್ಲಿ ಸ್ಟೇಟ್ ಹೈವೆಯನ್ನು ನೋಡಿ ಗುರುತಿಸಿರುತ್ತಾರೆ. ನಂತರ ಸ.ನಂ. **43** ರಲ್ಲಿ ಕಾಣುವ ರಸ್ತೆಯನ್ನು ನೋಡಿ ಗುರುತಿಸುತ್ತಾರೆ. ನಂತರ ಸಾಕ್ಷಿ ಮುಂದುವರೆದು ಪೂರ್ತಿ ಜಮೀನು ನನ್ನದೇ ಎಂದು ಹೇಳುತ್ತಾರೆ. ಹಳದಿ ಬಣ್ಣದಿಂದ ಗುರುಸಿರುವ ಜಮೀನು ದಾವಾ ಆಸ್ತಿ ಎಂದರೆ ಸರಿಯಲ್ಲ. ಸ.ನಂ. **43** ಮಂಜುರಾದ ಆಸ್ತಿ ಏನು ಬೆಳೆ ಬೆಳೆಯುತ್ತೀರಾ ಎಂರೆ ಮಾವಿನ ಗಿಡಗಳು ಇರುತ್ತವೆ. ಸಾಕ್ಷಿ ಮುಂದುರೆದ ಮೊದಲು ಗೊಂಡಂಬಿ ಬೆಳೆ ಇತ್ತು ಈಗ **8** ವರ್ಷಗಳಿಂದ ಮಾವಿನ ಗಿಡಗಳನ್ನು ಹಾಕಿರುತ್ತೇವೆ. ರಸ್ತೆಯಿಂದ ಪೂರ್ವ ದಿಕ್ಕಿಗೆ ಇರುವ ಯಾವ ಬೆಳೆ ಹಾಕಿರುತ್ತೀರಾ

ಎಂದರೆ ರಾಗಿ ಬೆಳೆ ಹಾಕಿರುತ್ತೇವೆ. ಎಷ್ಟು ವರ್ಷಗಳಿಂದ ರಾಗಿ ಬೆಳೆ ಬೆಳೆಯುತ್ತೀರಾ ಎಂದರೆ 4 ವರ್ಷಗಳಿಂದ ಈಚೆಗೆ ರಾಗಿ ಬೆಳೆ ಬೆಳೆಯುತ್ತೇವೆ ಮೊದಲು ಮಾವಿನ ಬೆಳೆಗಳು ಇತ್ತು. ಮಂಜೂರಾದ ಜಮೀನಿನಲ್ಲಿ ಮೊದಲು ಗೊಡಂಬಿ ಬೆಳೆಗಳನ್ನು ಬೆಳೆದಿರುವುದಕ್ಕೆ ನಮೂದು ಇರುತ್ತದೆಯಾ ಎಂದರೆ ಇರುತ್ತದೆ. ಸದರಿ ಪಹಣಿಗಳನ್ನು ನ್ಯಾಯಾಲಯಕ್ಕೆ ಕೊಡಲು ತೊಂದರೆ ಇರುತ್ತದೆಯಾ ಎಂದರೆ ಇಲ್ಲ. ಸಾಕ್ಷಿಗೆ ಮತ್ತೊಂದು ನಕ್ಷೆಯನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸುತ್ತಾರೆ. ಅದನ್ನು ನಿಪಿ 11 ಎಂದು ಗುರುತಿಸಲಾಯಿತು. ಅರದಲ್ಲಿ ಸ.ನಂ. 43 ರಲ್ಲಿ ಪೂರ್ವ ದಿಕ್ಕಿಗೆ ರಸ್ತೆ ಆದ ನಂತರ ಇರುವ ಜಮೀನಿನಲ್ಲಿ ದೊಡ್ಡ ಮರಗಳು ಇರುತ್ತವೆಯಾ ಎಂದರೆ ಸಾಕ್ಷಿ ಅದರಲ್ಲಿ ನೀವು ಹೇಳಿರುವ ತರಹ ಕಾಣಿಸುತ್ತಿಲ್ಲ ಎನ್ನುತ್ತಾರೆ. ನಿಪಿ 11 ರಲ್ಲಿ ಕಾಣುವ ಸ.ನಂ. 242 ಜಮೀನು 124, 123, ಈ ಜಮೀನುಗಳೆಲ್ಲವೂ ವೇಮಣ್ಣ ರವರಿಗೆ ಸೇರಿರುತ್ತವೆ ಎಂದರೆ ಸ.ನಂ. 242/1 ಕೈವಾರ ಮಂಜೇಶ ರವರ ಹೆಸರಿಗೆ ಬರುತ್ತದೆ. ಯಾವಾಗಿನಿಂದ ಅವರ ಹೆಸರಿನಿಂದ ಅವರ ಹೆಸರಿಗೆ ಬರುತ್ತದೆ ಎಂದರೆ 4 ವರ್ಷಗಳಿಂದ ಬರುತ್ತದೆ. ಆ ಬಗ್ಗೆ ದಾಖಲೆ ಕೊಡಲು ತೊಂದರೆ ಇದೆಯಾ ಎಂದರೆ ಕೊಡುತ್ತೇನೆ. ಸದಂರಿ ಸ.ನಂ. ಗಳ ಆಸ್ತಿ ವೇಮಣ್ಣ ರವರ ಮಗಳಾದ ಶಾರದಮ್ಮ ಮಾರಾಟ ಮಾಡಿರುವ ಕಾರಣ ಮಂಜೇಶ ರವರ ಹೆಸರಿಗಗೆ ಬರುತ್ತದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ವೇಮಣ್ಣ ರವರ ಎಲ್ಲಾ ಅಸ್ತಿಗಳ ವಿಭಾಗಕ್ಕೆ ದಾವೆ ಇದ್ದು ದಾವೆಗಳು ಚಾಲ್ತಿಯಲ್ಲಿದ್ದಾಗ ಶಾರದಮ್ಮ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪೂರ್ವಕ್ಕೆ ರಸ್ತೆ ನಂತರ ಸ.ನಂ. 43 ವೇಮಣ್ಣ ಆದ ಕಾರಣ ಅದನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಸದರಿ ವೇಮಣ್ಣ ರವರು ಜಮೀನಿಗೆ ಹಾಕಿದ್ದ ಕಟ್ಟಾಳೆ ಬೆಲಿ ಹಾಕಿದರುವುದನ್ನು ನೀವು

ಕಿತ್ತು ಹಾಕಿರುತ್ತೀರಿ ಎಂದರೆ ಸರಿಯಲ್ಲ. ಸದರಿ ವಿಚಾರವಾಗಿ ನಿಮ ಹಾಗೂ ನಿಮ್ಮ ವಿರುದ್ಧ ದೂರು ಸಲ್ಲಿಸಿರುತ್ತಾರೆ ಎಂದರೆ ಸುಳ್ಳು, ವಾದಿಗಳು ಹೆಣ್ಣು ಮಕ್ಕಳಾದ ಕಾರಣ ಅವರಿಗೆ ತೊಂದರೆ ಕೊಡುತ್ತಿದ್ದಿರೆಂದು ವಾದಿಗಳು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸುಳ್ಳು, ದಾವಾ ಆಸ್ತಿಯಲ್ಲಿ ನಿಮಗೆ ಹಕ್ಕು ಅಧಿಕಾರ ಇಲ್ಲದಿದ್ದರೂ ಸಹ ವಾದಿಗಳಿಗೆ ತೋಂದರೆ ಕೊಡುತ್ತಿದ್ದಿರಾ ಎಂದರೆ ಸರಿಯಲ್ಲ. ನಿಮ್ಮ ಹೆಂಡತಿ ಊಲವಾಡಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಎಂದರೆ ಹೌದು. ಅವರ ಅಧ್ಯಕ್ಷರಾದ ಸಮದಯದಲ್ಲಿ ಪಂಚಾಯಿತಿಯಿಂದ ನೀವು ಅನಧೀಕೃತವಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ. ಆ ವಿಚಾರವಾರಗಿ ಪಂಚಾಯಿತಿಯಲ್ಲಿ ನಡಾವಳಿ ಮಾಡಿ ಸದರಿ ಸೃಷ್ಟಿತ ದಾಖಲೆಗಳನ್ನು ರದ್ದುಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆ ರೀತಿ ಮಡಿದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ವಾದಿಗಳಿಗೆ ಸಂಬಂಧಿಸಿದ ಜಮೀನನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾಖಲೆ ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.